## ಪ್ರಬಂಧ



ಮಕ್ಕಳು ನಡುಗುತ್ತಿದ್ದದ್ದು ಆನೆಗಳು ಬಂದು ಪಕ್ಕದ ತೋಟದಲ್ಲಿ ನಾಲ್ಕಾರು ದಿನ ವಾಸ್ತವ್ಯ ಹೂಡಿದರೂ ಯಾರಿಗೂ ತೊಂದರೆಯಾಗದೆ ನಾವೆಲ್ಲಾ ಇವತ್ತಿಗೂ ಬದುಕಿ ಉಳಿದಿರುವುದು. ಜನಸಂದಣಿಯೇ ಇಲ್ಲದ ಕಾಡಿನ ವಾತಾವರಣದಲ್ಲಿ ವಾಹನಗಳ ಸದ್ದು ಕರೆಂಟ್‌ನ ಪರಿಚಯ ಇಲ್ಲದೆ ಗುಮ್ಮ ಮತ್ತಿತರ ಕಾಗೆ ಹಕ್ಕಿ ಪಕ್ಷಿಗಳ ಧ್ವನಿ ಕೇಳುತ್ತಾ ನಾವು ಬೆಳೆದದ್ದು ಮನಸ್ಸಿಗೆ ಬಹಳ ಹಿತ ಮತ್ತು ಆನಂದ ನೀಡುತ್ತದೆ.

ಗುಮ್ಮ ಎಂಬ ನಾಮಪದಕ್ಕೂ ನಾನಾರ್ಥಗಳುಂಟು. ಗೂಗೆ, ಗುಮ್ಮ, ಗೂಬೆ ಇತ್ಯಾದಿಯಾಗಿ ಬಳಕೆಯಾಗುವುದರೊಂದಿಗೆ, ಮಕ್ಕಳಿಗೆ ಭಯ ಹುಟ್ಟಿಸುವ ಒಂದು ಕಾಲ್ಪನಿಕ ಭೂತವೇ ಗುಮ್ಮ. ಬೇರೆಯವರ ತಲೆಯ ಮೇಲೆ ಅಪವಾದ ಹೊರಿಸುವ ಸಂದರ್ಭದಲ್ಲಿ ಗೂಬೆ ಎಂಬ ಪದ ಬಳಕೆಯಾಗುತ್ತದೆ. ಮನುಷ್ಯರನ್ನು ಮನುಷ್ಯರೇ, 'ಏಯ್ ಗೂಬೆ ಏಯ್ ಗೂಗೆ' ಅಂತ ಕೂಗಿ ಕರೆಯುವುದನ್ನು ನೋಡಬಹುದು. ಆದರೆ ವಾಸ್ತವವಾಗಿ ಗುಮ್ಮ ಎಲ್ಲಾ ಹಳೆಯ ಅಮ್ಮಂದಿರ ಪ್ರತಿ ನಿತ್ಯದ ಸ್ಮರಣೀಯ ಪಕ್ಷಿ. ಗುಮ್ಮಕ್ಕಿ ಅಂತಲೂ ಇದನ್ನು ಕರೆಯುತ್ತಾರೆ. ನಾನಾ ಹೆಸರಿನ ಗುಮ್ಮಗಳಿವೆ. 'ಪಾಳುಗುಮ್ಮ' ಭಾರತ, ಶ್ರೀಲಂಕಾ, ಬರ್ಮಾ, ಬಾಂಗ್ಲಾ ದೇಶಗಳಲ್ಲಿ ವಾಸಿಸುತ್ತದೆ. ಹೊಂಬಣ್ಣದ ರೆಕ್ಕೆ ಎದೆ ಮತ್ತು ಕುತ್ತಿಗೆಯ ಹತ್ತಿರ ಹೊಳೆಯುವ ರೇಷ್ಮೆಯಂತಹ ಪುಕ್ಕಗಳಿರುತ್ತವೆ. ಕೋಟೆಕೊತ್ತಲ,